## ಸೂಕ್ತಿಪ್ರಭ

ಪ್ರತಿಯೊಂದರಲ್ಲಿಯೂ ಸುಖವನ್ನು ಕಾಣುವ ಸ್ಥಿತಿಯನ್ನು ನೀವು ಮುಟ್ಟಬೇಕಾದರೆ ಯಾವುದನ್ನೂ ಸುಖಿಸಬಾರದು.

—ಸೇಂಟ್ ಜಾನ್ ಆಫ್ ದಿ ಕ್ರಾಸ್

ನಾವು ಶ್ರೇಷ್ಠ ವ್ಯಕ್ತಿಗಳನ್ನು ನೋಡಿದಾಗ ಅವರಂತಾಗಲು ಆಲೋಚಿಸಬೇಕು. ದುಷ್ಟವೃತ್ತಿಯ ವ್ಯಕ್ತಿಗಳನ್ನು ನೋಡಿದಾಗ ನಮ್ಮ ಅಂತರಂಗವನ್ನು ಪ್ರವೇಶಿಸಿ ನಮ್ಮನ್ನು ನಾವು ಪರೀಕ್ಷಿಸಬೇಕು.

—ಕನ್‌ಫ್ಯೂಷಿಯಸ್

ಮಾನವನ ಅವಶ್ಯಕತೆ ಎಷ್ಟು ಕಡಮೆ ಇರುತ್ತದೊ ಅಷ್ಟರಮಟ್ಟಿಗೆ ಅವನು ಶ್ರೀಮಂತ.

—ಹೆನ್ರಿ ಡೇವಿಡ್ ಥೋರೊ

ಸೋಲದವನು ಗೆಲ್ಲುವುದಿಲ್ಲ ; ಬೀಳದವನು ಏಳುವುದಿಲ್ಲ.

—ವ್ಹಿಟಿಯರ್

ತಿಳಿಯಲಾಗುವುದಿಲ್ಲವೆಂಬ ತಿಳಿವಳಿಕೆಯೇ ಜ್ಞಾನ.

—ಎಮರ್ಸನ್

ಪರಿಪೂರ್ಣ ಯಂತ್ರವಾಗಿರುವುದಕ್ಕಿಂತ ಅಪರಿಪೂರ್ಣ ಮಾನವನಾಗಿರುವುದು ಲೇಸು.

ಗೋಡೆಗೆ ಎಸೆದ ಚೆಂಡು ಪುಟಿದು ಹಿಂತಿರುಗಿ ಬರುವಂತೆ, ಇನ್ನೊಬ್ಬರಿಗೆ ಮಾಡಿದ ಕೆಡುಕು ಮಾಡಿದವನಿಗೇ ಬಂದು ತಾಗುತ್ತದೆ.

—ಸುಭಾಷಿತ

ದೊರಕದುದಕ್ಕೆ ಹಾತೊರೆಯದೆ, ದೊರಕಿದ್ದನ್ನು ಅನುಭವಿಸುವಾತನೇ ತೃಪ್ತ, ಅವನೇ ಸುಖಿ.

—ಸುಭಾಷಿತ

ಆಯುಧವ ಹಿಡಿದವನು ಆಯುಧದ ಆಳು.

—ರಾಬರ್ಟ್ ಬ್ರೌನಿಂಗ್

## ಪ್ರಾರ್ಥನೆ

ಯತ್ಪ್ರಜ್ಞಾನಮುತ ಚೇತೋ ಧೃತಿಶ್ಚ
ಯಜ್ಜ್ಯೋತಿರಂತರಮೃತಂ ಪ್ರಜಾಸು ।
ಯಸ್ಮಾನ್ನ ಋತೇ ಕಿಂಚನ
ಕರ್ಮ ಕ್ರಿಯತೇ
ತನ್ಮೇ ಮನಃ ಶಿವಸಂಕಲ್ಪಮಸ್ತು ।

ಯಾವುದು ತಿಳಿವಳಿಕೆಯೋ ಮತ್ತು ಆಲೋಚನೆಯ ಶಕ್ತಿಯೋ, ಧೈರ್ಯವೋ, ಯಾವುದು ಜನಗಳೊಳಗೆ ಅಳಿಯದ ಬೆಳಕಾಗಿರುವುದೋ, ಯಾವುದನ್ನು ಬಿಟ್ಟು ಯಾರೂ ಯಾವ ಕೆಲಸವನ್ನೂ ಮಾಡಲಾರರೋ ಆ ನನ್ನ ಮನಸ್ಸು ಮಂಗಳಕರವಾದ ಸಂಕಲ್ಪದಿಂದ ಕೂಡಿರಲಿ.

ಯೇ ಮೇ ಹೃದಯಂ ಯೇ ಚ ದೇವಾ
ಯೇ ಅಂತರಿಕ್ಷಂ ಬಹುಧಾ ಕಲ್ಪಯಂತಿ ।
ಯೇ ಶ್ರೋತ್ರಂ ಚ ಚಕ್ಷುಷೀ ಸಂಚರಂತಿ
ತನ್ಮೇ ಮನಃ ಶಿವಸಂಕಲ್ಪಮಸ್ತು ।

ಯಾವ ದೇವತೆಗಳು ಯಾವುದರಿಂದ ನನ್ನ ,ದಯವನ್ನೂ ಆಕಾಶವನ್ನೂ ಬಗೆ ಬಗೆಯಾಗಿ ಮಾಡುವರೋ ಯಾವುದರಿಂದ ಕಿವಿ ಕಣ್ಣುಗಳು ಕೆಲಸಮಾಡುವುವೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೇನ ಕರ್ಮಾಣಿ ಪ್ರಚರಂತಿ ಧೀರಾ
ವಿಪ್ರಾ ವಾಚಾ ಮನಸಾ ಕರ್ಮಣಾ ವಾ ।
ಯತ್ಸ್ವಾಂ ದಿಶಮನುಸಂಯಂತಿ ಪ್ರಾಣಿನ-
ಸ್ತನ್ಮೇ ಮನಃ ಶಿವಸಂಕಲ್ಪಮಸ್ತು ।

ಸಂಯಮಶೀಲರಾದ ಬ್ರಹ್ಮಜ್ಞಾನಿಗಳು ಮಾತು ಕೃತಿ ಆಲೋಚನೆಗಳನ್ನು ಮಾಡುವುದು ಯಾವುದರಿಂದಲೋ, ಪ್ರಾಣಿಗಳು ತಂತಮ್ಮ ದಿಕ್ಕುದಾರಿಗಳನ್ನು ಹಿಡಿದು ಹೋಗುವುದು ಯಾವುದರಿಂದಲೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.